**"ಎಲ್ಲರಿಗೂ ಸಮಾನ ಮತ್ತು ನ್ಯಾಯೋಚಿತ ಭವಿಷ್ಯ" ಕುರಿತು G20 ಅಧಿವೇಶನದಲ್ಲಿ ಪ್ರಧಾನಮಂತ್ರಿ ಭಾಷಣ**

**(ನವೆಂಬರ್ 23, 2025)**

ನವೆಂಬರ್ 23, 2025

"ಎಲ್ಲರಿಗೂ ಸಮಾನ ಮತ್ತು ನ್ಯಾಯೋಚಿತ ಭವಿಷ್ಯ - ನಿರ್ಣಾಯಕ ಖನಿಜಗಳು; ಯೋಗ್ಯ ಕೆಲಸ; ಕೃತಕ ಬುದ್ಧಿಮತ್ತೆ" ಎಂಬ ವಿಷಯದ ಕುರಿತ G20 ಶೃಂಗಸಭೆಯ ಮೂರನೇ ಅಧಿವೇಶನವನ್ನು ಉದ್ದೇಶಿಸಿ ಪ್ರಧಾನಮಂತ್ರಿ ಇಂದು ಮಾತನಾಡಿದರು. ನಿರ್ಣಾಯಕ ತಂತ್ರಜ್ಞಾನಗಳನ್ನು ಉತ್ತೇಜಿಸುವ ರೀತಿಯಲ್ಲಿ ಮೂಲಭೂತ ಬದಲಾವಣೆ ಬೇಕೆಂದು ಪ್ರಧಾನಮಂತ್ರಿ ಕರೆ ನೀಡಿದರು. ಅಂತಹ ತಂತ್ರಜ್ಞಾನ ಅಪ್ಲಿಕೇಶನ್‌ಗಳು 'ಹಣಕಾಸು-ಕೇಂದ್ರಿತ ಆಗಿರುವ ಬದಲು 'ಮಾನವ-ಕೇಂದ್ರಿತ' ಆಗಿರಬೇಕು, 'ರಾಷ್ಟ್ರೀಯ' ಆಗಿರುವ ಬದಲಿಗೆ 'ಜಾಗತಿಕ'ವಾಗಿರಬೇಕು ಮತ್ತು 'ವಿಶೇಷ ಮಾದರಿಗಳ' ಬದಲಾಗಿ 'ತೆರೆದ ಮೂಲ'ದ ಆಧಾರದ ಮೇಲಿರಬೇಕು ಎಂದು ಅವರು ಉಲ್ಲೇಖಿಸಿದರು. ಈ ದೃಷ್ಟಿಕೋನವನ್ನು ಭಾರತದ ತಂತ್ರಜ್ಞಾನ ಪರಿಸರ ವ್ಯವಸ್ಥೆಗೆ ಸಂಯೋಜಿಸಲಾಗಿದೆ ಮತ್ತು ಇದು ಭಾರತ ವಿಶ್ವದಲ್ಲಿ ಮುಂಚೂಣಿಯಲ್ಲಿರುವ ಬಾಹ್ಯಾಕಾಶ ಅಪ್ಲಿಕೇಶನ್‌ಗಳು, AI ಅಥವಾ ಡಿಜಿಟಲ್ ಪಾವತಿಗಳಲ್ಲಿ ಗಮನಾರ್ಹ ಪ್ರಯೋಜನಗಳಿಗೆ ಕಾರಣವಾಗಿದೆ ಎಂದು ಅವರು ವಿವರಿಸಿದರು.

2. ಕೃತಕ ಬುದ್ಧಿಮತ್ತೆಯ ಕುರಿತು ಮಾತನಾಡಿದ ಪ್ರಧಾನಿ, ಸಮಾನ ಪ್ರವೇಶ, ಜನಸಂಖ್ಯಾ ಮಟ್ಟದ ಕೌಶಲ್ಯ ಮತ್ತು ಜವಾಬ್ದಾರಿಯುತ ನಿಯೋಜನೆಯ ಆಧಾರದಲ್ಲಿ ಭಾರತದ ವಿಧಾನವನ್ನು ವಿವರಿಸಿದರು. ಭಾರತ-AI ಮಿಷನ್ ಅಡಿಯಲ್ಲಿ, AI ಪ್ರಯೋಜನಗಳು ದೇಶದ ಪ್ರತಿಯೊಬ್ಬರನ್ನೂ ತಲುಪುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಪ್ರವೇಶಿಸಬಹುದಾದ ಉನ್ನತ-ಕಾರ್ಯಕ್ಷಮತೆಯ ಕಂಪ್ಯೂಟಿಂಗ್ ಸಾಮರ್ಥ್ಯವನ್ನು ನಿರ್ಮಿಸಲಾಗುತ್ತಿದೆ ಎಂದು ಅವರು ಹೇಳಿದರು. AI ಜಾಗತಿಕ ಒಳಿತಿಗಾಗಿ ಬಳಕೆಯಾಗಬೇಕು ಎಂಬುದನ್ನು ಒತ್ತಿ ಹೇಳಿದ ಪ್ರಧಾನಮಂತ್ರಿ, ಪಾರದರ್ಶಕತೆ, ಮಾನವ ಮೇಲ್ವಿಚಾರಣೆ, ಸುರಕ್ಷತೆ-ವಿನ್ಯಾಸ ಮತ್ತು ದುರುಪಯೋಗ ತಡೆಗಟ್ಟುವಿಕೆಯ ತತ್ವಗಳ ಆಧಾರದ ಮೇಲೆ ಜಾಗತಿಕ ಒಪ್ಪಂದಕ್ಕೆ ಕರೆ ನೀಡಿದರು. AI ಮಾನವ ಸಾಮರ್ಥ್ಯಗಳನ್ನು ವಿಸ್ತರಿಸಬೇಕು. ಆದರೆ, ಅಂತಿಮ ನಿರ್ಧಾರವನ್ನು ಮನುಷ್ಯರು ಸ್ವತಃ ಮಾಡಬೇಕು ಎಂದು ಅವರು ಒತ್ತಿ ಹೇಳಿದರು. 'ಸರ್ವಜನಂ ಹಿತಾಯ, ಸರ್ವಜನಂ ಸುಖಾಯ' [ಎಲ್ಲರ ಕಲ್ಯಾಣ, ಎಲ್ಲರ ಸಂತೋಷ] ಎಂಬ ವಿಷಯದೊಂದಿಗೆ ಭಾರತವು 2026 ಫೆಬ್ರುವರಿಯಲ್ಲಿ AI ಇಂಪ್ಯಾಕ್ಟ್ ಶೃಂಗಸಭೆಯನ್ನು ಆಯೋಜಿಸುತ್ತಿದೆ ಎಂದು ಪ್ರಧಾನಮಂತ್ರಿ ಹೇಳಿದರು ಮತ್ತು ಈ ಪ್ರಯತ್ನಕ್ಕೆ ಕೈಜೋಡಿಸಲು ಎಲ್ಲಾ G20 ದೇಶಗಳನ್ನು ಆಹ್ವಾನಿಸಿದರು.

3. AI ಯುಗದಲ್ಲಿ, 'ಇಂದಿನ ಉದ್ಯೋಗಗಳು' ಎಂಬ ನಮ್ಮ ದೃಷ್ಟಿಕೋನವನ್ನು 'ನಾಳೆಯ ಸಾಮರ್ಥ್ಯಗಳು' ಕಡೆಗೆ ತ್ವರಿತವಾಗಿ ಬದಲಾಯಿಸುವ ಅಗತ್ಯವಿದೆ ಎಂದು ಪ್ರಧಾನಮಂತ್ರಿ ಒತ್ತಿ ಹೇಳಿದರು. ನವದೆಹಲಿ G20 ಶೃಂಗಸಭೆಯಲ್ಲಿ ಪ್ರತಿಭಾ ಚಲನಶೀಲತೆಯಲ್ಲಿ

ಮಾಡಿರುವ ಪ್ರಗತಿಯನ್ನು ನೆನಪಿಸಿಕೊಂಡ ಅವರು, ಮುಂಬರುವ ವರ್ಷಗಳಲ್ಲಿ ಪ್ರತಿಭಾ ಚಲನಶೀಲತೆಗಾಗಿ ಈ ಗುಂಪು, ಜಾಗತಿಕ ಚೌಕಟ್ಟನ್ನು ಅಭಿವೃದ್ಧಿಪಡಿಸಬೇಕು ಎಂದು ಪ್ರಸ್ತಾಪಿಸಿದರು.

4. ಜಾಗತಿಕ ಯೋಗಕ್ಷೇಮಕ್ಕಾಗಿ ಭಾರತದ ಸಂದೇಶ ಮತ್ತು ಬದ್ಧತೆಯನ್ನು ವಿವರಿಸುವ ಮೂಲಕ ಪ್ರಧಾನಮಂತ್ರಿಯವರು ತಮ್ಮ ಮಾತನ್ನು ಮುಕ್ತಾಯಗೊಳಿಸಿದರು - ಇದು ಸುಸ್ಥಿರ ಅಭಿವೃದ್ಧಿ, ವಿಶ್ವಾಸಾರ್ಹ ವ್ಯಾಪಾರ, ನ್ಯಾಯೋಚಿತ ಹಣಕಾಸು ಮತ್ತು ಎಲ್ಲರ ಏಳ್ಗೆಯ ಅಭಿವೃದ್ಧಿಯನ್ನು ಸೂಚಿಸುತ್ತದೆ. ಪ್ರಧಾನಮಂತ್ರಿಯ ಪೂರ್ಣ ಭಾಷಣ[ಇಲ್ಲಿ].

ಜೋಹಾನ್ಸ್‌ಬರ್ಗ್

ನವೆಂಬರ್ 23, 2025